ಫೇವರಿಟಿಸಮ್, ನೆಪೋಟಿಸಮ್ ಅವಾಯ್ಡ್ ಮಾಡುವುದಕ್ಕೋಸ್ಕರ ಮತ್ತು ಸರಿಯಾಗಿ ಇಂಡಸ್ಟ್ರಿಯಲ್ ಕ್ಲೈಮೇಟ್ ಕೊನೆಯ ಒಬ್ಬ ಮನುಷ್ಯನಿಗೆ ಮುಟ್ಟಬೇಕು ಎಲ್ಲಾ ಹಂತಗಳಲ್ಲಿ ಹೆಡ್ ಕ್ವಾರ್ಟರ್ಸ್‌ಗೆ ಹೋಗಬೇಕು ಹೋಬಳಿಗೆ ತಾಲ್ಲೂಕಿಗೆ ಹೋಗಬೇಕು ಎಂದು ಹೇಳಿದಿರಲ್ಲ ಇದನ್ನು ತಿಳಿಸಲಿಕ್ಕೋಸ್ಕರ ಪ್ರಜಾಪ್ರತಿನಿಧಿಗಳನ್ನು ನಿಮ್ಮ ಸರಕಾರದ ಆದೇಶದ ಮುಖಾಂತರ ನೀವೇನಾದರೂ ಅವರನ್ನು ಸಮಾಲೋಚನೆ ಮಾಡಲಿಕ್ಕೆ ಪ್ರಯತ್ನ ಮಾಡುತ್ತೀರೋ.

MR.SPEAKER:- To regularise favouritism?

SRI H.SHIVAPPA:- Institutionalisation of corruption and favouritism is a different issue. To check it and arrest it are you going to involve the local representatives?

MR. SPEAKER:- You examine it.

ಶ್ರೀ ಎಲ್.ಆರ್.ಶಿವರಾಮೇಗೌಡ:- ನೀವು ರಿಸರ್ವೇಷನ್ ಪಾಲಿಸಿಯನ್ನು ಅಡಾಪ್ಟ್ ಮಾಡುತ್ತೀರೋ?

ಅಧ್ಯಕ್ಷರು:- ಆಗಲೇ ಗೋವಿಂದ ಕಾರಜೋಳ ಅವರ ಪ್ರಶ್ನೆಗೆ ಉತ್ತರ ಹೇಳುವಾಗಲೇ ಹತ್ತು ಪರ್ಸೆಂಟ್ ಮೀಸಲಾತಿ ಇದೆ ಎಂದು ಹೇಳಿದರು.

2. ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ತಿಪ್ಪೆಸ್ವಾಮಿ (ಸಣ್ಣ ನೀರಾವರಿ ಸಚಿವರು):- 43 ಪ್ರಶ್ನೆಗಳ ಪೈಕಿ 35 ಪ್ರಶ್ನೆಗಳಿಗೆ ಉತ್ತರವನ್ನು ಸದನದ ಮುಂದಿಡುತ್ತೇನೆ.

ವಿಷಯ:- ಪರಿಶಿಷ್ಟ ಜಾತಿ ಮತ್ತು ಪಂಗಡದ ವಿದ್ಯಾರ್ಥಿಗಳಿಗೆ ಉಚಿತ ಸಮವಸ್ತ್ರಕ್ಕೆ ಖರ್ಚು ಮಾಡಿರುವ ಹಣ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 169 (491)

ಶ್ರೀ ಅಶೋಕ ಎಸ್.ಕಾಟವೆ (ಹುಬ್ಬಳ್ಳಿ ನಗರ):- ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ರಾಜ್ಯದಲ್ಲಿ ಹಿಂದುಳಿದ, ಪರಿಶಿಷ್ಟ ಜಾತಿ, ಪಂಗಡ ವಿದ್ಯಾರ್ಥಿಗಳಿಗೆ 1994-95, 1995-96ನೇ ಸಾಲಿನಲ್ಲಿ ಉಚಿತ ಸಮವಸ್ತ್ರಕ್ಕೆ ಸರ್ಕಾರದವರು ಎಷ್ಟು ಹಣ ಖರ್ಚು ಮಾಡಿದ್ದಾರೆ, (ಯಾವ ಯಾವ ಸಂಸ್ಥೆಗಳಿಂದ ಬಟ್ಟೆ ಖರೀದಿಸಿದ್ದಾರೆ)

ಆ) ಧಾರವಾಡ ಜಿಲ್ಲೆಯಲ್ಲಿರುವ ಉಚಿತ ವಿದ್ಯಾರ್ಥಿ ನಿಲಯಗಳೆಷ್ಟು? ತಾಲೂಕುವಾರು ವಿದ್ಯಾರ್ಥಿಗಳಿಗೆ 1995-96ನೇ ಸಾಲಿನಲ್ಲಿ ಊಟೋಪಚಾರಕ್ಕೆ ಮಾಡಿದ ಖರ್ಚು ಎಷ್ಟು? ವಿದ್ಯಾರ್ಥಿಗಳೆಷ್ಟು?